ಎದುರಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಸವಕಲ್ಯಾಣ ಪಟ್ಟಣಕ್ಕೆ ಚುಳಕಿ ನಾಲಾ ಯೋಜನೆಯಿಂದ ಕುಡಿಯುವ ನೀರನ್ನು ಒದಗಿಸಲು ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಇ) ಬಸವಕಲ್ಯಾಣ ಪಟ್ಟಣದ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲು ಸರ್ಕಾರವು ಕೈಗೊಂಡ ಶಾಶ್ವತ ಹಾಗೂ ತುರ್ತು ಕ್ರಮಗಳೇನು?

ಈ) 1996-97ರಲ್ಲಿ ಬಸವಕಲ್ಯಾಣ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಸರ್ಕಾರವು ಬಿಡುಗಡೆ ಮಾಡಲು ನಿರ್ಧರಿಸಿದೆಯೇ?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಬಂದಿದೆ.

ಆ) ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಇ) ಬಸವಕಲ್ಯಾಣ ಪಟ್ಟಣಕ್ಕೆ ಶಾಶ್ವತವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲು, ಸರ್ಕಾರವು ಚುಳುಕಿನಾಲ ಮೂಲದಿಂದ ರೂ.750.0 ಲಕ್ಷಗಳ ಅಂದಾಜಿಗೆ ಸೈದ್ಧಾಂತಿಕ ಮಂಜೂರಾತಿ ನೀಡಿದೆ. ಪುರಸಭೆಯ ವಂತಿಕೆ ಶೇಕಡ 15ರಷ್ಟು ಹಣದ (ರೂ.112.50 ಲಕ್ಷದಲ್ಲಿ) 1/3 ಭಾಗದ ಹಣ ರೂ.37.50 ಲಕ್ಷಗಳು ಠೇವಣಿ ಮಾಡಿದ ನಂತರ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಬಗ್ಗೆ ಪರಿಶೀಲಿಸಿ ಕೆಲಸವನ್ನು ಪ್ರಾರಂಭಿಸಲಾಗುವುದು.

ತುರ್ತು ಕ್ರಮ ಅನ್ವಯ ಜಿಲ್ಲಾಧಿಕಾರಿಗಳ ಅಭಾವ ಪರಿಹಾರ ಕಾರ್ಯಕ್ರಮದ ಅಡಿಯಲ್ಲಿ 10 ಕೊಳವೆ ಬಾವಿಗಳನ್ನು ಪಟ್ಟಣದಲ್ಲಿ ಕೊರೆಯಲಾಗಿದ್ದು ಇವುಗಳಿಗೆ ಕೈಪಂಪುಗಳನ್ನು ಅಳವಡಿಸಲಾಗಿದೆ. ಹಾಗೂ 2 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಕೊಳವೆ ಮಾರ್ಗಗಳನ್ನು ವಿವಿಧ ಬಡಾವಣೆಗಳಲ್ಲಿ ವಿಸ್ತರಣೆಯನ್ನು ಮಾಡಿ ಕುಡಿಯುವ ನೀರನ್ನು ಸರಬರಾಜು ಮಾಡುಲಾಗುತ್ತಿದೆ.

ಈ) ಹೆಚ್ಚಿಗೆ ಹಣ ಬಿಡುಗಡೆ ಮಾಡುವ ವಿಷಯ ಸಧ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ವಿಷಯ:- ಇಂಡಿ ನಗರಕ್ಕೆ ಕುಡಿಯುವ ನೀರಿನ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 494 (1057)

ಶ್ರೀ ಬಸವಗೌಡ ರಾ.ಪಾಟೀಲ (ವಿಜಾಪುರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಇಂಡಿ ನಗರಕ್ಕೆ ಭೀಮಾ ನದಿಯಿಂದ ಕುಡಿಯುವ ನೀರಿನ ಯೋಜನೆಗೆ ಎಷ್ಟು

ಹಣ ಮಂಜೂರು ಮಾಡಲಾಗಿದೆ ಹಾಗೂ ಎಷ್ಟು ಹಣ ವೆಚ್ಚ ಮಾಡಲಾಗಿದೆ?

2. ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ? ಈ ಯೋಜನೆ ಪೂರ್ಣಗೊಂಡು ಎಂದಿನಿಂದ ಕುಡಿಯುವ ನೀರನ್ನು ಒದಗಿಸಲಾಗುವುದು?

3. ಈ ಯೋಜನೆಗೆ ಅಂದಾಜು ಮೊತ್ತವೆಷ್ಟು? ಪ್ರತಿ ದಿನಕ್ಕೆ ಎಷ್ಟು ಗ್ಯಾಲನ್ ನೀರನ್ನು ಪೂರೈಸಲಾಗುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

1. ಈ ಯೋಜನೆಗೆ 328.50 ಲಕ್ಷ ರೂ.ಗಳ ಅಂದಾಜು ಮಂಜೂರಾಗಿರುತ್ತದೆ. ಈ ಯೋಜನೆಗೆ ಮೇ 1996ರವರೆಗೆ ರೂ.39.40 ರೂ.ಗಳನ್ನು ವೆಚ್ಚ ಮಾಡಲಾಗಿದೆ.

2. ಯೋಜನೆಯ ವಿವಿಧ ಘಟಕಗಳ ಹಂತ ಈ ಕೆಳಗಿನಂತಿದೆ:-

ಎ) 17.61 ಕಿ.ಮೀ. ಉದ್ದದ 375 ಮಿ.ಮೀ. ವ್ಯಾಸದ ಕಚ್ಚಾ ನೀರಿನ ಏರು ಕೊಳವೆ ಮಾರ್ಗಕ್ಕಾಗಿ 2.50 ಕಿ.ಮೀ. ಕೊಳವೆಗಳು ಸರಬರಾಜಾಗಿದೆ. ಅಳವಡಿಸುವ ಕೆಲಸ ಪ್ರಗತಿಯಲ್ಲಿದೆ.

ಬಿ) 2.00 ಲಕ್ಷ ಗ್ಯಾಲನ್ ಮೇಲ್ಮಟ್ಟದ ಜಲಸಂಗ್ರಹಾಗಾರದ ಕೆಲಸವು ಪ್ರಗತಿಯಲ್ಲಿದೆ.

ಸಿ) ಮೂಲ ಸ್ಥಾವರದ ಕೆಲಸಗಳಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದೆ. ಕೆಲಸವನ್ನು ಸಧ್ಯದಲ್ಲೇ ಪ್ರಾರಂಭಿಸಲಾಗುವುದು.

ಡಿ) ಶುದ್ಧೀಕರಣಾಗಾರಕ್ಕೆ ಟೆಂಡರನ್ನು ಕರೆಯಲಾಗಿದೆ.

ಯೋಜನೆಯನ್ನು 1998-99ನೇ ಸಾಲಿನಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

3. ಈ ಯೋಜನೆಯ ಅಂದಾಜು ಮೊತ್ತ ರೂ.328.50 ಲಕ್ಷಗಳು. ಈ ಯೋಜನೆಯು ಕಾರ್ಯಗತವಾದ ಮೇಲೆ ಪ್ರತಿ ತಲಾ ದಿನಂಪ್ರತಿ ತಲಾ 115 ಲೀಟರ್ (25 ಗ್ಯಾಲನ್) ನೀರನ್ನು ಪೂರೈಸಬಹುದಾಗಿದೆ.

ವಿಷಯ:- ವಿಜಾಪುರ ಜಿಲ್ಲೆ ನಂದಿ ಸಹಕಾರಿ ಸಕ್ಕರೆ ಗಿರಣಿಯ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 495 (45)

ಶ್ರೀ ಬಸವಗೌಡ ರಾ.ಪಾಟೀಲ (ವಿಜಾಪುರ):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ಗಲಗಲಿಯ ನಂದಿ ಸಹಕಾರಿ ಸಕ್ಕರೆ ಗಿರಣಿಯು ರೈತರಿಗೆ